International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

# "ಒಂದು ಸಾಮಾಜಿಕ ಸಮಸ್ಯೆಯಾಗಿ ವೃದ್ಧಾಪ್ಯ /ವೃದ್ಧರ ಸಮಸ್ಯೆಗಳು"

**ಡಾ.ಸರ್ವಮಂಗಳ**
**ಸಹ ಪ್ರಾಧ್ಯಾಪಕರು**
**ಸಮಾಜಶಾಸ್ತ್ರ ವಿಭಾಗ**
**ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.**
**ಮೊಬೈಲ್ ಸಂಖ್ಯೆ: 9964887664**
**ಇ–ಮೇಲ್ : sarvamangalaannur@gmail.com**

## ಪೀಠಿಕೆ :

'ವೃದ್ಧಾಪ್ಯ' / 'ವಯಸ್ಸಾಗುವಿಕೆ' ಎಂಬುದು ಒಂದು ಜೈವಿಕ ಪ್ರಕ್ರಿಯೆಯಾಗಿದ್ದು, ಅದರ ಮೇಲೆ ವ್ಯಕ್ತಿಗೆ ಯಾವುದೇ ನಿಯಂತ್ರಣವಿರುವುದಿಲ್ಲ. ಜೀವನದ ಯಾತ್ರೆಯ ಕಟ್ಟಕಡೆಯ ಹಂತವಾಗಿರುವ ವೃದ್ಧಾಪ್ಯ ಅನಿವಾರ್ಯವಾದುದು ಆಗಿದೆ. ವೃದ್ಧಾಪ್ಯ ಎಂಬುದು ಬಹು ಕಾಲದವರೆಗೆ ಕುರಿ ಸಾಮಾಜಿಕ ಸಮಸ್ಯೆ ಎನಿಸಿರಲಿಲ್ಲ. ಕಾರಣ ಭಾರತವನ್ನೊಳಗೊಂಡಂತೆ ಹಲವಾರು ಸಮಾಜಗಳಲ್ಲಿ ವೃದ್ಧರಿಗೆ ವಿಶೇಷ ಗೌರವ, ಸಾಮಾಜಿಕ ಸ್ಥಾನಮಾನ ಮತ್ತು ಪ್ರತಿಷ್ಠೆ ಇತ್ತು. ಕುಟುಂಬದಲ್ಲಿಯೂ ಅವರೇ ಯಜಮಾನರಾಗಿದ್ದು ಅವರ ಆಣತಿಯಂತೆ ಎಲ್ಲವೂ ನಡೆಯುತ್ತಿತ್ತು. ಬಂಧುತ್ವ ಸಮೂಹಗಳಲ್ಲಂತೂ ಅವರಿಗೆ ಹೆಚ್ಚಿನ ಪ್ರಾಧಾನ್ಯತೆ ಇದ್ದು, ಅವರ ಅಪಾರ ಲೌಕಿಕ ಅನುಭವಕ್ಕೆ ವಿಶಿಷ್ಟ ಗೌರವವಿತ್ತಲ್ಲದೆ , ಉಳಿದವರಿಗೆ ಅದು ಮಾರ್ಗದರ್ಶನ ವಾಗಿತ್ತು. ಆದರಿಂದು ಬದಲಾದ ಸಾಮಾಜಿಕ, ಆರ್ಥಿಕ , ಉದ್ಯೋಗ ಸಂಬಂಧಿತ ಪರಿಸರ, ಕೈಗಾರೀಕರಣ, ನಗರೀಕರಣ, ಉದ್ಯೋಗಗಳಿಗೆ ಸ್ತ್ರೀಯರ ಸ್ಪರ್ಧೆ, ಉದ್ಯೋಗ ಸ್ಪರ್ಧೆಯ ಮತ್ತು ನಿವೃತ್ತಿಯ ಒಂದು ಸಾಧನವಾಗಿ ವಯಸ್ಸಿನ ಪರಿಗಣನೆ, ನಿವೃತ್ತಿವೇತನ ಸಮಸ್ಯೆ, ವ್ಯಕ್ತಿ ವಾದದ ಬೆಳವಣಿಗೆ, ಕುಗ್ಗುತ್ತಿರುವ ಕೌಟುಂಬಿಕ ಪ್ರಾಬಲ್ಯ ಮತ್ತು ಮೌಲ್ಯಗಳು, ದುರ್ಬಲವಾಗುತ್ತಿರುವ ಕೌಟುಂಬಿಕ ಮತ್ತು ಬಂಧುತ್ವದ ಬಂಧ ಮುಂತಾದ ಬೆಳವಣಿಗೆಗಳಿಂದಾಗಿ ವೃದ್ಧರು ಮತ್ತಷ್ಟು ಪ್ರತ್ಯೇಕತೆಗೆ ಮತ್ತು ಭಾವನಾತ್ಮಕ ಪರಕೀಯತೆಗೆ ಸಿಲುಕುತ್ತಿದ್ದು ಪ್ರಸ್ತುತ ದಿನಗಳಲ್ಲಿ ವೃದ್ಧಾಪ್ಯವು ಒಂದು ಸಾಮಾಜಿಕ ಸಮಸ್ಯೆ ಎನಿಸಿದೆ. ಅಂದರೆ ಇಂದು ಎರಡು ದೃಷ್ಟಿಗಳಲ್ಲಿ ವೃದ್ಧಾಪ್ಯವು ಸಾಮಾಜಿಕ ಸಮಸ್ಯೆಯಾಗಿ ಪರಿಣಮಿಸಿದೆ. ಅವುಗಳೆಂದರೆ:

- ವೃದ್ಧರಿಗೆ ತಾವೇ ಒಂದು ಸಮಸ್ಯೆಯಾಗುತ್ತಿರುವ ಭಾವನೆ ಮೂಡುತ್ತಿರುವುದು
- ಸಮಾಜದ ದೃಷ್ಟಿಯಿಂದ ವೃದ್ಧರು ಸಮಸ್ಯೆ ಯಾಗುತ್ತಿರುವುದು

ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವನ್ನು ವೃದ್ಧರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು ಮತ್ತು ಅವುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಕೈಗೊಳ್ಳಲಾಗಿರುವ ಕ್ರಮಗಳನ್ನು ತಿಳಿಯುವ ನಿಟ್ಟಿನಲ್ಲಿ ಕೈಗೊಳ್ಳಲಾಗಿದೆ. ಪ್ರಸ್ತುತ ಸಂಶೋಧನಾ ಲೇಖನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮಾಧ್ಯಮಿಕ ಮಾಹಿತಿಯ ಮೂಲಗಳಿಂದ ಸಂಗ್ರಹಿಸಲಾಗಿದೆ.

**ಸಂಶೋಧನಾ ವಿಧಾನ:–**

**ಅಧ್ಯಯನದ ಉದ್ದೇಶಗಳು:–**

- ವೃದ್ಧರ ಸಮಸ್ಯೆಗಳಿಗೆ ಕಾರಣಗಳನ್ನು ತಿಳಿಯುವುದು
- ವೃದ್ಧರು ಅನುಭವಿಸುತ್ತಿರುವ ಪ್ರಮುಖ ಸಮಸ್ಯೆಗಳಾವುವು ಎಂಬುದನ್ನು ತಿಳಿಯುವುದು
- ವೃದ್ಧರ ಸಮಸ್ಯೆಗಳ ನಿವಾರಣೆಗೆ ಮತ್ತು ಅವರ ಹಿತರಕ್ಷಣೆಗೆ ಇರುವ ಕ್ರಮಗಳನ್ನು ತಿಳಿಯುವುದು

**ಮಾಹಿತಿ ಸಂಗ್ರಹಣೆಯ ವಿಧಾನ:–**

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮಾಧ್ಯಮಿಕ ಮಾಹಿತಿಯ ಮೂಲಗಳಾದ ಪುಸ್ತಕಗಳು, ಲೇಖನಗಳು, ಪತ್ರಿಕೆಗಳು ಮತ್ತು ಅಂತರ್ ಜಾಲದ ಮೂಲಕ ಸಂಗ್ರಹಿಸಲಾಗಿದೆ.

## ವೃದ್ಧರು ಎಂದರೆ ಯಾರು?

ವೃದ್ಧರು ಎಂದರೆ ಯಾರು ಎಂಬುದನ್ನು ಅರ್ಥೈಸುವಲ್ಲಿ ವ್ಯಕ್ತಿಯ ವಯಸ್ಸು ಮತ್ತು ಶಾರೀರಿಕ ಲಕ್ಷಣಗಳು ಪ್ರಮುಖ ಆಧಾರಗಳಾಗಿವೆ.

ಸಾಮಾನ್ಯವಾಗಿ 60 ವರ್ಷ ದಾಟಿದವರನ್ನು ಮತ್ತು ಶಾರೀರಿಕ ,ಮಾನಸಿಕ ಕಾರ್ಯಗಳನ್ನು ನಿರ್ವಹಿಸಲು ಉತ್ಸಾಹ ಕುಂದಿರುವ ಆರೋಗ್ಯ ಕ್ಷೀಣಿಸಿ ತ್ರಾಸದಾಯಕ ಕೆಲಸಗಳನ್ನು ನಿರ್ವಹಿಸಲಾಗದ, ಇನ್ನೊಬ್ಬರ ಸಹಾಯವಿಲ್ಲದೆ ಆಶ್ರಯವಿಲ್ಲದೆ ಜೀವಿಸಲಾಗದವರೇ ವೃದ್ಧರು.

ಒಂದು ರಾಷ್ಟ್ರದ ಜನಸಂಖ್ಯೆಯಲ್ಲಿ 0-14 ವಯೋ ಗುಂಪಿನ ಮಕ್ಕಳ ಪ್ರಮಾಣ ಕಡಿಮೆಗೊಂಡು ,59+ ಆದವರ ಪ್ರಮಾಣ ಹೆಚ್ಚಾಗುವುದನ್ನು ಜನಸಂಖ್ಯೆಯ ವಯಸ್ಸಾಗುವಿಕೆ ಎಂತಲೂ ಕರೆಯಲಾಗಿದೆ.

## ವೃದ್ಧಾಪ್ಯದ ಅರ್ಥ:

ಸಾಮಾನ್ಯವಾಗಿ ವ್ಯಕ್ತಿಯ ಜೀವನದ ಕಟ್ಟ ಕಡೆಯ ಹಂತವನ್ನು ವೃದ್ಧಾಪ್ಯ ಎನ್ನಲಾಗಿದೆ.

- **ಹೆಸ್** ಪ್ರಕಾರ "ವೃದ್ಧಾಪ್ಯ ವೆಂಬುದು ಜೀವನಕ್ಕೆ ಸಂಬಂಧಿಸಿದ ಅನಿವಾರ್ಯವಾದ ಮತ್ತು ಹಿಂದುಮುಂದಾಗಿಸಲು ಅಸಾಧ್ಯವಾದ ಜೈವಿಕ ಪ್ರಕ್ರಿಯೆ"
- **ಮೇಯರ್ಸ** ಪ್ರಕಾರ "ವಯಸ್ಸಾಗುವಿಕೆ ಎಂಬುದು ಒಂದು ಜೈವಿಕ ಪ್ರಕ್ರಿಯೆಯಾಗಿದ್ದು, ಜೀವಿಯು ತನ್ನ ಜನನದಿಂದ ಸಾವಿನವರೆಗೆ ಅವರ ಸಾಮಾಜಿಕ ಸ್ಥಾನಮಾನ, ಪಾತ್ರ ,ಮನಸ್ಥಿತಿ ಮತ್ತು ವ್ಯಕ್ತಿಗತ ಗುಣಗಳಲ್ಲಿ ಸ್ಥಿತ್ಯಂತರಕ್ಕೊಳಗಾಗುವ ಪ್ರಕ್ರಿಯೆ"

## ವೃದ್ಧರ ಸಮಸ್ಯೆಗೆ ಕಾರಣಗಳು:

- ಅವಿಭಕ್ತ ಕುಟುಂಬದ ಶಿಥಿಲತೆ
- ಮಕ್ಕಳ ನಿರ್ಲಕ್ಷ್ಯ
- ಮೌಲ್ಯಗಳ ಕುಸಿತ
- ಸ್ವಾರ್ಥಪರತೆ
- ಸಮಾಜ ಮತ್ತು ಸರ್ಕಾರದ ನಿರ್ಲಕ್ಷ್ಯ
- ಆರ್ಥಿಕ ಅಂಶಗಳು / ವೃದ್ಧರು ಆರ್ಥಿಕ ಹೊರೆ ಎಂಬ ಭಾವನೆ
- ಬದಲಾದ ಸಾಮಾಜಿಕ, ಆರ್ಥಿಕ , ಉದ್ಯೋಗ ಸಂಬಂಧಿತ ಪರಿಸರ
- ಕೈಗಾರೀಕರಣ & ನಗರೀಕರಣ

- ಉದ್ಯೋಗಗಳಿಗೆ ಸ್ತ್ರೀಯರ ಸೇರ್ಪಡೆ
- ಉದ್ಯೋಗ ಸೇರ್ಪಡೆಯ ಮತ್ತು ನಿವೃತ್ತಿಯ ಒಂದು ಸಾಧನವಾಗಿ ವಯಸ್ಸಿನ ಪರಿಗಣನೆ
- ನಿವೃತ್ತಿವೇತನ ಸಮಸ್ಯೆ
- ವ್ಯಕ್ತಿ ವಾದದ ಬೆಳವಣಿಗೆ
- ಕುಗ್ಗುತ್ತಿರುವ ಕೌಟುಂಬಿಕ ಪ್ರಾಬಲ್ಯ ಮತ್ತು ಮೌಲ್ಯಗಳು, ದುರ್ಬಲವಾಗುತ್ತಿರುವ ಕೌಟುಂಬಿಕ ಮತ್ತು ಬಂಧುತ್ವದ ಬಂಧ

**ವೃದ್ಧರ ಸಮಸ್ಯೆಗಳು:**

ಮಾನವನ ಜೀವನವೆಂಬುದೇ ಸಮಸ್ಯೆಗಳಿಂದ ಮುಕ್ತವಾಗಿ ಸುಖಕರವಾಗಿರಲ್ಲ. ಹಾಗಾಗಿ ತನ್ನ ಜೀವನದ ವಿಭಿನ್ನ ಕಾಲಘಟ್ಟಗಳಲ್ಲಿ ವಿಭಿನ್ನ ಪರಿಸ್ಥಿತಿ, ಸಮಸ್ಯೆಗಳನ್ನು ಮಾನವ ಎದುರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಮಾನವನ ಜೀವನದ ಅಂತಿಮ ಘಟ್ಟ ವಾಗಿರುವ ವೃದ್ಧಾಪ್ಯದಲ್ಲಿ ಸಮಸ್ಯೆಗಳಿರುವುದು ಸಹಜ. ಆದರೆ ವೃದ್ಧರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ,ಕೌಟುಂಬಿಕ ಮತ್ತಿತರ ಹಿನ್ನೆಲೆಗಳು ಅಥವಾ ಪರಿಸ್ಥಿತಿಗಳು ಬೇರೆ ಬೇರೆ ಆಗಿರುವುದರಿಂದ ವೃದ್ಧಾಪ್ಯದ ಅಥವಾ ವೃದ್ಧರ ಸಮಸ್ಯೆಗಳನ್ನು ಸಾಮಾನ್ಯೀಕರಿಸುವುದು ಕಷ್ಟಕರ. ಆದಾಗ್ಯೂ ವೃದ್ಧರು ಸಾಮಾನ್ಯವಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ಈ ಕೆಳಕಂಡಂತೆ ಗುರುತಿಸಬಹುದಾಗಿದೆ.

**1. ವೃದ್ಧರ ಸಾಮಾಜಿಕ ಸಮಸ್ಯೆಗಳು:**

- ಪೀಳಿಗೆಗಳ ಅಂತರ
- ಸಾಮಾಜಿಕ ಸ್ಥಾನಮಾನ, ಗೌರವ ,ಪ್ರತಿಷ್ಠೆ ಮತ್ತು ಅಧಿಕಾರ ರಹಿತೆ
- ಸಾಮಾಜಿಕ ಭದ್ರತೆಯ ಕೊರತೆ
- ಸಾಮಾಜಿಕ ತಾರತಮ್ಯ, ಅಪಹಾಸ್ಯ, ತಿರಸ್ಕಾರ ಮತ್ತು ದುರ್ಬಳಕೆ
- ಅವಿಭಕ್ತ ಕುಟುಂಬ ಮತ್ತು ಪರಂಪರಾಗತ ಮೌಲ್ಯಗಳ ಕುಸಿತ
- ಕೆಳಮಟ್ಟದ ಅಂತಸ್ತು
- ವಸತಿ ಸಮಸ್ಯೆ
- ಸಾಮಾಜಿಕ ವಿಘಟನೆ
- ಭಿಕ್ಷಾಟನೆ
- ಒಂಟಿತನ /ಏಕಾಂತತೆ

**2. ವೃದ್ಧರ ಆರ್ಥಿಕ ಸಮಸ್ಯೆಗಳು:**

- ಆರ್ಥಿಕ ಪರಾವಲಂಬನೆ
- ಅಸಂಘಟಿತ ಕ್ಷೇತ್ರದ ಅವಲಂಬನೆ
- ಬಡತನ
- ಅಲ್ಪಮೊತ್ತದ ಪಿಂಚಣಿ
- ಅನುತ್ಪಾದಕತೆ
- ನಿರುದ್ಯೋಗ
- ಮೂಲಭೂತ ಸೌಲಭ್ಯಗಳಿಂದ ವಂಚನೆ

**3. ವೃದ್ಧರ ಆರೋಗ್ಯ ಸಮಸ್ಯೆಗಳು:**

- **ಶಾರೀರಿಕ ಆರೋಗ್ಯ ಸಮಸ್ಯೆಗಳು:** ರಕ್ತಹೀನತೆ, ನರದೌರ್ಬಲ್ಯ, ಮುಪ್ಪಿನ ದೌರ್ಬಲ್ಯ, ಸೊಂಟ – ಬೆನ್ನು –ಮಂಡಿ ನೋ ವು,ನಿಶ್ಯಕ್ತಿ ಸಂಧಿವಾತ, ಮೂಳೆಗಳು ಸವೆಯುವಿಕೆ ,ಕೀಲುನೋವು ,ಹೃದಯಾಘಾತ ,ಪಾರ್ಶ್ವವಾಯು, ಅಧಿಕ ರಕ್ತದೊತ್ತಡ ,ಅಧಿಕ ಮೂತ್ರ, ಚಿತ್ರ ವಿಸರ್ಜನೆಯ ನಿಯಂತ್ರಣದ ವಿಫಲತೆ, ಸಕ್ಕರೆ ರೋಗ, ದೃಷ್ಟಿಹೀನತೆ, ಕಿವುಡುತನ ,ನೆನಪಿನ ಶಕ್ತಿ ಕುಂದುವಿಕೆ, ದುಡಿಯಲಾಗದ ಅಶಕ್ತತೆ, ಕೃಶವಾದ ಶರೀರ, ಹಲ್ಲುಗಳ ದೌರ್ಬಲ್ಯ, ಸುಕ್ಕುಗಟ್ಟಿದ ಚರ್ಮ ಇತ್ಯಾದಿ.
- **ಮಾನಸಿಕ ಆರೋಗ್ಯ ಸಮಸ್ಯೆಗಳು:** ಮಾನಸಿಕ ಖಿನ್ನತೆ, ಹತಾಶೆ, ನಿರಾಸೆ, ಒಂಟಿತನ, ನಿದ್ರಾಹೀನತೆ, ಭಯ– ಆತಂಕ, ಪ್ರತ್ಯೇಕತೆ, ಆತಂಕ ಸಂಶಯ, ಜ್ಞಾಪಕ ಶಕ್ತಿಯ ಕೊರತೆ, ಮುಂಗೋಪ ,ಇತ್ಯಾದಿ

**4. ವೃದ್ಧರ ಕೌಟುಂಬಿಕ ಮತ್ತು ಭಾವನಾತ್ಮಕ ಸಮಸ್ಯೆಗಳು:**

- **ಕೌಟುಂಬಿಕ ಸಮಸ್ಯೆಗಳು:** ಅವಿಭಕ್ತ ಕುಟುಂಬ ಶಿಥಿಲಗೊಳ್ಳುತ್ತಿರುವುದರಿಂದ ವೃದ್ಧರು ಅಸಹಾಯಕರಾಗುತ್ತಿದ್ದಾರೆ ಮತ್ತು ಚಿಂತಾಕ್ರಾಂತರಾಗಿದ್ದಾರೆ. ಕುಟುಂಬದಲ್ಲಿ ಯಜಮಾನಿಕೆ ನಡೆಸಿ ಕುಟುಂಬದ ಎಲ್ಲಾ ವ್ಯವಹಾರಗಳ ಉಸ್ತುವಾರಿ ನಿರ್ವಹಿಸಿದ,ಕುಟುಂಬದ ಘನತೆಯನ್ನು ಎತ್ತಿಹಿಡಿದ ವೃದ್ಧರು ಎಲ್ಲವನ್ನು ಕಳೆದುಕೊಂಡು ಮಕ್ಕಳ ಆಜ್ಞಾಪಾಲಕರಾಗಿ ,ಅವರ ಅಧೀನಕ್ಕೆ ಒಳಗಾಗಿ ಮಾನಸಿಕವಾಗಿ ಕೊರಗುತ್ತಿದ್ದಾರೆ . ಕುಟುಂಬದಿಂದ ದೂರವಾಗಿ ವೃದ್ಧಾಶ್ರಮಗಳಿಗೆ ದೂಡಲ್ಪಡುತ್ತಿದ್ದಾರೆ.
- **ಭಾವನಾತ್ಮಕ ಸಮಸ್ಯೆಗಳು:** ಮಕ್ಕಳ ಪ್ರೀತಿ–ವಾತ್ಸಲ್ಯ, ರಕ್ಷಣೆ ,ಗೌರವಾದರಗಳಿಂದ ವಂಚಿತರಾಗಿ ಮಾನಸಿಕ ಆಘಾತಕ್ಕೆ ಸಿಲುಕಿದ್ದಾರೆ.ನಿರ್ಲಕ್ಷದ ಭಾವನೆ ,ನಿರಾಶಾಭಾವನೆ ,ಒಂಟಿತನ, ಆತ್ಮಹತ್ಯೆಯತ್ತ ಒಲವು

**ವೃದ್ಧರ** ಸಮಸ್ಯೆಗಳ ನಿವಾರಣೆ**ಗಾಗಿ/ಹಿತಾಶಕ್ತಿಗಾಗಿ/ಹಕ್ಕುಗಳ ರಕ್ಷಣೆಗಾಗಿ ಇರುವ ಕ್ರಮಗಳು:**

ವೃದ್ಧಾಪ್ಯವು ಸಾರ್ವತ್ರಿಕವಾದದ್ದು ,ವಿಶ್ವ ವ್ಯಾಪಕವಾದದ್ದು, ಅನಿವಾರ್ಯವಾದುದು . ಹಾಗಾಗಿ ವೃದ್ಧಾಪ್ಯ ಶಾಪವಲ್ಲ , ರೋಗವಲ್ಲ , ತರವಲ್ಲ ಅಪಾಯಕಾರಿಯೂ ಅಲ್ಲ ,ಅದೊಂದು ಸಹಜ ಹಂತ ,ಶಾರೀರಿಕ ಅಗತ್ಯ. ಆದ್ದರಿಂದ ವೃದ್ಧರ ಸಮಸ್ಯೆಗಳು ಇತರೆ ಸಾಮಾಜಿಕ ಸಮಸ್ಯೆಗಳಿಗಿಂತ ತೀರ ಭಿನ್ನವಾದವುಗಳಾಗಿದ್ದು ,ಒಂದು ಮಾನವೀಯತೆ ಆದರಿಸಿ ಅವರ ರಕ್ಷಣೆ ಮತ್ತು ಹಕ್ಕುಗಳನ್ನು ರಕ್ಷಿಸುವುದು ಅಗತ್ಯವಾಗಿದೆ .ಈ ನಿಟ್ಟಿನಲ್ಲಿ ವೃದ್ಧರ ರಕ್ಷಣೆಗಾಗಿ ಕೈಗೊಳ್ಳಲಾಗಿರುವ ರಕ್ಷಣಾ ಕ್ರಮಗಳೆಂದರೆ:

**1.ವೃದ್ಧರಿಗೆ ಸೂಕ್ತ ಆರ್ಥಿಕ ನೆರವನ್ನು ಒದಗಿಸುವ ಕಾರ್ಯಕ್ರಮಗಳು:**

- ನಿವೃತ್ತಿ ವೇತನ ಯೋಜನೆ /ಪಿಂಚಣಿ ಯೋಜನೆ
- ವೃದ್ಧಾಪ್ಯ ವೇತನ ಯೋಜನೆ
- ವೃದ್ಧರಿಗೆ ಪುನರ್ ಉದ್ಯೋಗವಕಾಶ
- ವೈದ್ಯಕೀಯ ಭತ್ಯೆ

**2.ವೃದ್ದರಿಗಾಗಿ ಇರುವ ಸಹಾಯಕ ಅಥವಾ ಪೂರಕ ಸೇವೆಗಳು (ವೃದ್ದರಿಗಾಗಿ ಇರುವ ಕೆಲವು ವಿಶೇಷ ರಿಯಾಯಿತಿಗಳು ಮತ್ತು ಸೌಲಭ್ಯಗಳು) :**

- ರಾಷ್ಟ್ರೀಯ ವೃದ್ಧಾಪ್ಯ ವೇತನ–1995
- ಹಿರಿಯ ನಾಗರಿಕರಿಗೆ ಆದಾಯ ತೆರಿಗೆಯಲ್ಲಿ ರಿಯಾಯಿತಿ

- ವೃದ್ಧರಿಗೆ ರೈಲು ಮತ್ತು ಬಸ್ಸು ಪ್ರಯಾಣ ದರದಲ್ಲಿ ರಿಯಾಯಿತಿ
- ವೃದ್ಧರಿಗಾಗಿ ಅನ್ನಪೂರ್ಣ ಯೋಜನೆ-2000
- ನಿವೃತ್ತಿಯ ನಂತರ ನಿರಂತರ ಆದಾಯ ತರುವ ವಿಮಾ ಯೋಜನೆಗಳು

**3.ವೃದ್ಧರ ಸೇವೆಗಾಗಿ ಇರುವ ಸ್ವಯಂ ಸೇವಾ ಸಂಸ್ಥೆಗಳು:**

- ಹೆಲ್ತ್ ಹೇಜ್ ಇಂಡಿಯಾ-1978
- ಏಜ್ ಕೇರ್ ಇಂಡಿಯಾ-1980
- ಲಿಟ್ಲ್ ಸಿಸ್ಟರ್ಸ್ ಆಫ್ ದಿ ಪೂರ್-1839 ,ಫ್ರಾನ್ಸ್ ನಲ್ಲಿ ಸಿಸ್ಟರ್ ಜೀನ್ ಜುಗನ್ ಯಿಂದ ಆರಂಭ.
- ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್-1998

**4.ವೃದ್ಧರ ಕಲ್ಯಾಣ ಸಾಧಿಸಲು ಇರುವ ರಾಷ್ಟ್ರದ ಕಾರ್ಯಕ್ರಮಗಳು ಮತ್ತು ಯೋಜನೆಗಳು:**

- ವೃದ್ಧರಿಗಾಗಿ ರಾಷ್ಟ್ರೀಯ ನೀತಿ-1999
- ವೃದ್ಧರಿಗಾಗಿ ರಾಷ್ಟ್ರೀಯ ಪರಿಷತ್ತು-1999
- ವೃದ್ಧರ ಕಲ್ಯಾಣ ಯೋಜನೆಗಳು-1992
- ವೃದ್ಧಾಶ್ರಮಗಳ ಯೋಜನೆ
- ವೃದ್ಧರಿಗಾಗಿ ದಿನ ಪೋಷಣಾ ಕೇಂದ್ರಗಳು
- ವೃದ್ಧರಿಗಾಗಿ ಸಂಚಾರಿ ವೈದ್ಯಕೀಯ ಘಟಕಗಳು
- ಸಂಸ್ಥೆಗಳಲ್ಲದ ಮೂಲಗಳಿಂದ ವೃದ್ಧರಿಗೆ ಸೇವೆಗಳು
- ಜಿಲ್ಲೆಗೆ ಕನಿಷ್ಠ ಒಂದು ವೃದ್ಧಾಶ್ರಮ:1996-97

**5.ವೃದ್ದರಿಗಾಗಿ ಇರುವ ಅಂತರಾಷ್ಟ್ರೀಯ ಮಟ್ಟದ ಕ್ರಮಗಳು:**

ವಿಶ್ವಸಂಸ್ಥೆ, ವಿಶ್ವ ಆರೋಗ್ಯ ಸಂಘಟನೆ (WHO),ಅಂತರಾಷ್ಟ್ರೀಯ ಶೈಕ್ಷಣಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘಟನೆ(UNESCO) ಇತ್ಯಾದಿ ಅಂತರಾಷ್ಟ್ರೀಯ ಮಟ್ಟದ ಸಂಸ್ಥೆಗಳು ವೃದ್ಧರ ರಕ್ಷಣೆಗಾಗಿ 30ಕ್ಕೂ ಹೆಚ್ಚು ಯೋಜನೆಗಳನ್ನು ಜಾರಿಗೊಳಿಸಿವೆ. ವಿಶ್ವದ ಗಮನವನ್ನು ಹೆಚ್ಚುತ್ತಿರುವ ವೃದ್ಧರ ಸಂಖ್ಯೆ ,ಸಮಸ್ಯೆ ಮತ್ತು ಜೀವನದತ್ತ ಸೆಳೆಯುವುದಕ್ಕಾಗಿ ವೃದ್ಧರ ಹೆಸರಿನಲ್ಲಿ ಅನೇಕ ಆಚರಣೆಗಳನ್ನು ವಿಶ್ವ ರಾಷ್ಟ್ರ ಸಂಸ್ಥೆ ನಡೆಸಲು ಕರೆ ನೀಡಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ:

- ವೃದ್ಧರ ಅಂತರರಾಷ್ಟ್ರೀಯ ವರ್ಷ-1999
- ಅಂತರಾಷ್ಟ್ರೀಯ ವೃದ್ಧರ ದಿನಾಚರಣೆ-ಅಕ್ಟೋಬರ್ 1
- ರಾಷ್ಟ್ರೀಯ ನಿವೃತ್ತಿ ವೇತನ ಪಡೆಯುವವರ ದಿನ-ಡಿಸೆಂಬರ್ 17.

**6.ವೃದ್ಧರ ಹಕ್ಕುಗಳ ಸಂರಕ್ಷಣೆಗಾಗಿ ಇರುವ ಕಾನೂನುಗಳು:**

- **1956ರ ಹಿಂದೂ ದತ್ತಕ ಮತ್ತು ಸಂರಕ್ಷಣಾ ಅಧಿನಿಯಮ** : ಹೆತ್ತವರು ತಮ್ಮ ವೃದ್ಧಾಪ್ಯದಲ್ಲಿ ಆರ್ಥಿಕವಾಗಿ ಅಶಕ್ತರಾಗಿದ್ದಾರೆ ಮಕ್ಕಳಿಂದ ಆರ್ಥಿಕ ಸಹಾಯವನ್ನು ನಿರೀಕ್ಷಿಸಬಹುದು.

- **1973ರ ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಾಂ 125ರ ಪ್ರಕಾರ:** ಹೆತ್ತವರು ಆರ್ಥಿಕವಾಗಿ ದುರ್ಬಲರಾಗಿದ್ದೂ, ಅವರ ಮಕ್ಕಳು ಆರ್ಥಿಕವಾಗಿ ಸಶಕ್ತರಿದ್ದು ಇವರ ನಿರ್ವಹಣೆಯನ್ನು ನಿರ್ಲಕ್ಷಿಸಿದರೆ ಯಾವುದೇ ಧರ್ಮೀಯರಾಗಿದ್ದರು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಗಳಿಗೆ ಮನವಿ ಸಲ್ಲಿಸುವ ಮೂಲಕ ತಮ್ಮ ಮಕ್ಕಳಿಂದ ಆರ್ಥಿಕ ನೆರವನ್ನು ಪಡೆಯಬಹುದಾಗಿದೆ. ನ್ಯಾಯಿಕ ದಂಡಾಧಿಕಾರಿಗಳು ಮಾಸಿಕ ಭತ್ಯೆಯನ್ನು ತೀರ್ಮಾನಿಸಿ ಆದೇಶ ನೀಡುತ್ತಾರೆ .ಎರಡು ಕಾನೂನುಗಳು ಮಗ ಅಥವಾ ಮಗಳು ಎನ್ನುವ ತಾರತಮ್ಯವಿಲ್ಲದೆ ಇಬ್ಬರಿಗೂ ಹೆತ್ತವರನ್ನು ಸಂರಕ್ಷಿಸುವ ಹೊಣೆಗಾರಿಕೆಯನ್ನು ಸಮಾನ ಸಮಾನವಾಗಿಸಿವೆ.
- **2007ರ ಪೋಷಕರ ಮತ್ತು ಹಿರಿಯ ನಾಗರಿಕರ ಸಂರಕ್ಷಣೆ ಮತ್ತು ರಕ್ಷಣಾ ಕಾಯ್ದೆ:** ಪೋಷಕರು ಸೇರಿದಂತೆ ಯಾವುದೇ ಹಿರಿಯ ನಾಗರಿಕರು ತಮ್ಮ ಸ್ವಂತ ದುಡಿಮೆಯಿಂದ ಅಥವಾ ಆಸ್ತಿಯಿಂದ ದಿನ ನಿತ್ಯದ ಖರ್ಚನ್ನು ಭರಿಸಲು ಅಸಕ್ತರಾಗಿದ್ದಾರೆ ಅಂಥವರು ಈ ಕಾಯಿದೆಯಡಿ ರಕ್ಷಣೆ ಪಡೆಯಬಹುದು. ಇದರ ಪ್ರಕಾರ ಹಿರಿಯ ನಾಗರಿಕರ ಆಸ್ತಿಗೆ ವಾರಸುದಾರ ರಾಗಿರುವ ಮಕ್ಕಳು–ಮೊಮ್ಮಕ್ಕಳು–ಸಂಬಂಧಿಕರ ಹಿರಿಯ ನಾಗರಿಕರನ್ನು ಸಂರಕ್ಷಿಸುವ ಆದ್ಯತೆಯನ್ನು ಹೊಂದಿರುತ್ತಾರೆ ಒಂದು ವೇಳೆ ಯಾರು ಇರದಿದ್ದಲ್ಲಿ ರಾಜ್ಯವು ಅಂತಹ ಹಿರಿಯ ನಾಗರಿಕರ ಸಂರಕ್ಷಣೆ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ.

**ಯಾರು ಈ ಕಾಯಿದೆಯಡಿಯಲ್ಲಿ ಮನವಿ ಸಲ್ಲಿಸಬಹುದು ಎಂದರೆ:**

- ಬಂಧುಗಳಿದ್ದು ಅವರಿಂದ ನಿರ್ಲಕ್ಷಿಸಲ್ಪಟ್ಟ ಹಿರಿಯರು
- ಅವರ ಪರವಾಗಿ ನೇಮಿಸಲ್ಪಟ್ಟ ವ್ಯಕ್ತಿ ಅಥವಾ ನೋಂದಾಯಿಸಲ್ಪಟ್ಟ ಸಂಸ್ಥೆ
- ನ್ಯಾಯಮಂಡಲಿ ತಾನೇ ಖುದ್ದಾಗಿ ವಿಷಯ ಪರಿಶೀಲನೆ ನಡೆಸಿ ಸಂಬಂಧಿಸಿದ ಮಕ್ಕಳು ಅಥವಾ ಸಂಬಂಧಿಕರಿಗೆ ನೋಟಿಸ್ ನೀಡಬಹುದು
- ಈ ಕಾಯಿದೆಯ ಮತ್ತೊಂದು ವಿಶಿಷ್ಟ ಲಕ್ಷಣವೆಂದರೆ ಅರ್ಜಿಯನ್ನು ಸಲ್ಲಿಸಿದ 90 ದಿನಗಳ ಒಳಗಾಗಿ ನ್ಯಾಯಮಂಡಳಿ ಅರ್ಜಿಗೆ ಸಂಬಂಧಿಸಿದ ವಿಷಯವನ್ನು ಇತ್ಯಾರ್ಥ ಮಾಡಬೇಕಾಗಿರುತ್ತದೆ. ಅಲ್ಲದೆ ವಿಚಾರಣ ಕಾಲಾವಧಿಯಲ್ಲಿ ನ್ಯಾಯಮಂಡಳಿ ಮಧ್ಯಂತರ ಮಾಸಾಶನವನ್ನು ಅವರಿಗೆ ನೀಡುವ ಅಧಿಕಾರವನ್ನು ಹೊಂದಿರುತ್ತದೆ

**ಈ ಕಾಯ್ದೆ ಮುಖ್ಯ ಲಕ್ಷಣಗಳು:**

- ಪೋಷಕರ ಮತ್ತು ಹಿರಿಯ ನಾಗರಿಕರ ಸಂರಕ್ಷಣೆಯ ಹೊಣೆಗಾರಿಕೆಯನ್ನು ಕಾನೂನು ಪ್ರಕಾರವಾಗಿ ಮಕ್ಕಳು ಅಥವಾ ಸಂಬಂಧಿಕರಿಗೆ ವಹಿಸಲಾಗಿದ್ದು, ತಪ್ಪಿದ್ದಲ್ಲಿ ನ್ಯಾಯಮಂಡಳಿಗೆ ನ್ಯಾಯಾಧಿಕರಣದ ಅಧಿಕಾರವನ್ನು ನೀಡಲಾಗಿದೆ
- ಮಕ್ಕಳು ಅಥವಾ ಸಂಬಂಧಿಕರು ಹಿರಿಯ ನಾಗರಿಕರ ಆಸ್ತಿಯನ್ನು ಬಲವಂತವಾಗಿ ಅಥವಾ ಮೋಸದಿಂದ ಪಡೆದುಕೊಂಡಿದ್ದು ನಂತರ ಅವರನ್ನು ನಿರ್ಲಕ್ಷಿಸಿದರೆ ಆಸ್ತಿಯ ವರ್ಗಾವಣೆಯನ್ನು ರದ್ದುಗೊಳಿಸುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇರುತ್ತದೆ
- ಈ ಕಾಯ್ದೆಯಡಿಯಲ್ಲಿ ಹಿರಿಯ ನಾಗರಿಕರನ್ನು ಅವರ ಮಕ್ಕಳು ಅಥವಾ ಸಂಬಂಧಿಕರು ದೂರವಿಟ್ಟಲ್ಲಿ, ತೊರೆದಲ್ಲಿ ಅಂಥವರಿಗೆ ದಂಡವನ್ನು ವಿಧಿಸಬಹುದಾಗಿದೆ
- ಹಿರಿಯ ನಾಗರಿಕರಿಗಾಗಿ ರಕ್ಷಣಾ ಮತ್ತು ವೈದ್ಯಕೀಯ ಸವಲತ್ತುಗಳ ಕುರಿತಾದ ಉಪಬಂಧಗಳನ್ನು ಹೇಳಲಾಗಿದೆ

**ಈ ಕಾಯಿದೆಯ ಸಮರ್ಥ ಅನುಷ್ಠಾನದ ಹಿನ್ನೆಲೆಯಲ್ಲಿ ರಾಜ್ಯಗಳು ನಿರ್ವಹಿಸಬೇಕಾದ ಕಾರ್ಯಗಳು:**

(ಹಿರಿಯ ನಾಗರಿಕರಿಗೆ ಸೌಲಭ್ಯಗಳನ್ನು ಉಚಿತವಾಗಿ ಮತ್ತು ಉತ್ತಮ ರೀತಿಯಲ್ಲಿ ಒದಗಿಸುವ ನಿಟ್ಟಿನಲ್ಲಿ)

- ಕಾಯ್ದೆಯನ್ನು ಸಮರ್ಥವಾಗಿ ಜಾರಿಗೊಳಿಸಲು ಸಹಾಯಕ ನಿಯಮಗಳ ರಚನೆ
- ಸಂರಕ್ಷಣಾ ಅಧಿಕಾರಿಗಳ ನೇಮಕಾತಿ
- ಸಂರಕ್ಷಣಾ ಮತ್ತು ಮೇಲ್ಮನವಿ ನ್ಯಾಯಮಂಡಳಿಗಳ ರಚನೆ
- **ಮೆಂಟೆನೆನ್ಸ್ ಅಂಡ್ ವೆಲ್ಫೇರ್ ಆಫ್ ಸೀನಿಯರ್ ಸಿಟಿಜನ್ಸ್ ಆಕ್ಟ್ ( ನಿರ್ವಹಣಾ ವೆಚ್ಚ ಮತ್ತು ಪಾಲಕರು ಹಾಗೂ ಹಿರಿಯ ನಾಗರಿಕರ ಕಲ್ಯಾಣ ಕಾಯ್ದೆ-2007,1/4/2008 ರಿಂದ ಜಾರಿ):** ಮಕ್ಕಳಿದ್ದರೂ ವೃದ್ಧಾಪ್ಯದ ದಿನಗಳಲ್ಲಿ ಅನಾಥರಂತೆ ಜೀವನ ಸಾಗಿಸಬೇಕಾದ ಅನಿವಾರ್ಯತೆ ಗೆ ತುತ್ತಾಗುತ್ತಿರುವ ಹಿರಿಯ ನಾಗರಿಕರ ಜೀವನವನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದ್ದು, ಹಿರಿಯ ನಾಗರಿಕರ ಕಾಯ್ದೆ 2007ಕ್ಕೆ ತಿದ್ದುಪಡಿ ತರುವ ಮೂಲಕ ಹಿರಿಯ ನಾಗರಿಕರ ಮಕ್ಕಳಷ್ಟೇ ಅಲ್ಲದೆ ಅಳಿಯಂದಿರು ,ಸೊಸೆಯಂದಿರು ಕೂಡ ಚೆನ್ನಾಗಿ ನೋಡಿಕೊಳ್ಳಬೇಕು .ನೋಡಿಕೊಳ್ಳದಿದ್ದರೆ ಈ ಕಾಯ್ದೆಯಡಿಯಲ್ಲಿ ಅವರು ಶಿಕ್ಷೆಗೆ ಅರ್ಹರು ಹಾಗೂ ಸೊಸೆ ಮತ್ತು ಅಳಿಯಂದಿರು ಕೂಡ ಮಾಸಾಶನ ನೀಡಬೇಕೆಂಬ ಅಂಶಗಳನ್ನು ಸೇರಿಸಲಾಗಿದೆ. 2007ರಲ್ಲಿ ಕಾಯ್ದೆ ಜಾರಿಗೆ ಬಂದ ನಂತರ ಆಗುತ್ತಿರುವ ಅತಿ ಮಹತ್ವದ ತಿದ್ದುಪಡಿ ಇದಾಗಿದೆ.

## 7.ಹಿರಿಯ ನಾಗರಿಕರ ಸಂರಕ್ಷಣೆಗಾಗಿ ಇರುವ ಇತರೆ ಯೋಜನೆಗಳು:

- ರಾಜ್ಯ ಹಿರಿಯ ನಾಗರಿಕರ ನೀತಿ
- ವೃದ್ಧಾಶ್ರಮಗಳು
- ಹಿರಿಯ ನಾಗರಿಕರಿಗಾಗಿ ಹಗಲು ಯೋಗಕ್ಷೇಮ ಕೇಂದ್ರಗಳು
- ಹಿರಿಯ ನಾಗರಿಕರ ಸಹಾಯವಾಣಿ: 1090
- ಹಿರಿಯ ನಾಗರಿಕರಿಗಾಗಿ ಗುರುತಿನ ಚೀಟಿ
- ರಿಯಾಯಿತಿ ದರದ ಬಸ್ ಪಾಸ್: 8/9/2008 ರಿಂದ 65 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಬಸ್ ಪ್ರಯಾಣದಲ್ಲಿ ಶೇಕಡ 25 ರಷ್ಟು ರಿಯಾಯಿತಿ
- ವೃದ್ಧಾಪ್ಯ ವೇತನ: ಮಾಸಿಕ 400ರೂ,
  **ಅಗತ್ಯ ದಾಖಲೆಗಳು-** ವಯಸ್ಸಿನ ದೃಢೀಕರಣ ಪತ್ರ ,ಆದಾಯ ಪ್ರಮಾಣ ಪತ್ರ ,ಕರ್ನಾಟಕದಲ್ಲಿ ವಾಸವಾಗಿರುವ ಬಗ್ಗೆ ವಾಸಸ್ಥಳ ದೃಢೀಕರಣ ಪತ್ರ.
- **ಸಂಧ್ಯಾ ಸುರಕ್ಷಾ ಯೋಜನೆ:** 2/7/2007, ಸಾಮಾಜಿಕ ಭದ್ರತಾ ರೂಪದಲ್ಲಿ ವಯೋವೃದ್ಧರಿಗೆ ರೂ 400 ಗಳ ಸಹಾಯಧನವನ್ನು ಮಾಸಿಕವಾಗಿ ನೀಡಲಾಗುತ್ತದೆ.

  **ಅರ್ಹತೆಗಳು:**

  1.65 ವರ್ಷಕ್ಕಿಂತ ಮೇಲ್ಪಟ್ಟ ವರಾಗಿರಬೇಕು

  2. ವಾರ್ಷಿಕ ಆದಾಯ 20,000ಕ್ಕಿಂತ ಹೆಚ್ಚಿರಬಾರದು

  3. ಮಕ್ಕಳ ಆದಾಯವು ತಂದೆ-ತಾಯಿಯವರ ವಾರ್ಷಿಕ ಆದಾಯಕ್ಕೆ ಪರಿಗಣಿಸಲ್ಪಡುವುದಿಲ್ಲ

  4.ಪತಿ-ಪತ್ನಿಯ ಖಾತೆಯಲ್ಲಿ ರೂ 1,10,000ಗಿಂತ ಹೆಚ್ಚಿನ ಠೇವಣಿ ಇರಬಾರದು

  5.ಯಾವುದೇ ರೀತಿಯ ಮಾಸಾಸನ /ಪಿಂಚಣಿಯನ್ನು ಪಡೆಯುವವರು ಈ ವೇತನಕ್ಕೆ ಅರ್ಹರಾಗಿರುವುದಿಲ್ಲ

6.ಅತಿ ಸಣ್ಣ ರೈತರು, ಸಣ್ಣ ರೈತರು ,ಕೃಷಿ ಕಾರ್ಮಿಕರು ,ಮೀನುಗಾರರು ಈ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ

## ಉಪಸಂಹಾರ:

ಭಾರತವನ್ನು ಮಕ್ಕಳ ದೇಶವೆಂದು ಕರೆಯುತ್ತಾರೆಯಾದರೂ ಇಲ್ಲಿ ವೃದ್ಧರ ಸಂಖ್ಯೆ ಹೆಚ್ಚಾಗಿದೆ .ಅಂದರೆ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 7.42 ರಷ್ಟು ವೃದ್ಧರು ಇದ್ದಾರೆ . ವೃದ್ಧರು ದೈಹಿಕ ಅಶಕ್ತತೆ, ಮಾನಸಿಕ ಅಸ್ಥಿರತೆ, ದೃಷ್ಟಿ ಮಾಂದ್ಯ ಮುಂತಾದ ಸಮಸ್ಯೆಗಳಿಂದ ದಿನದಿಂದ ದಿನಕ್ಕೆ ನರಳುತ್ತಿದ್ದಾರೆ. ಎಲ್ಲವನ್ನು ಲಾಭ-ನಷ್ಟದ ,ಉಪಯುಕ್ತತೆ -ನಿರುಪಯುಕ್ತತೆ ಹಿನ್ನೆಲೆಯಲ್ಲಿ ಅಳೆಯುವ ಪ್ರವೃತ್ತಿ ಇರುವ ಕಡೆಯೆಲ್ಲಾ ವೃದ್ಧರು ಅಲಕ್ಷ ಮತ್ತು ಅನಾದಾರಗಳಿಗೆ ಸಿಲುಕಿದ್ದಾರೆ. ತಾವು ಹುಟ್ಟಿ ಬೆಳೆದ ಪರಿಸರಕ್ಕೆ, ತಾವು ಪೋಷಿಸಿ- ಬೆಳೆಸಿದ ತಮ್ಮ ಮಕ್ಕಳುಗಳಿಗೆ ತಾವು ಬೇಡವಾಗುತ್ತಿದ್ದೇವೆ , ಅವರಿಂದ ದೂರ ಹೋಗುತ್ತಿದ್ದೇವೆ ಎಂಬ ನೋವು ಅವರಿಗೆ ಸಹಿಸಲು ಅಸಾಧ್ಯವಾಗಿದೆ. ಉದ್ಯೋಗದಿಂದ ನಿವೃತ್ತಿ ಹೊಂದಿರುವ ಕಾರಣ ಅವರಿಗೆ ಆದಾಯದ ಕೊರತೆಯುಂಟಾಗಿ, ಆರೋಗ್ಯ ಕುಸಿಯುವುದರ ಜೊತೆಗೆ ಕೌಟುಂಬಿಕ ವ್ಯವಹಾರಗಳಲ್ಲಿ ತಮ್ಮ ಹಿಡಿತ ಕಡಿಮೆಯಾಗುತ್ತಿದೆ ಎಂಬ ಭಾವನೆ ಅವರನ್ನು ಆವರಿಸಿದೆ. ಭಾರತದ ಗ್ರಾಮಗಳಿಗಿಂತ ನಗರಗಳಲ್ಲಿ ವೃದ್ಧರ ಸಮಸ್ಯೆ ತೀವ್ರವಾಗಿರುವಂತೆ ಜಗತ್ತಿನ ಪೂರ್ವ ದೇಶಗಳಿಗಿಂತ ಪಶ್ಚಿಮ ದೇಶಗಳ ವೃದ್ಧರ ಸ್ಥಿತಿ ದಯನೀಯವಾಗಿದೆ. ವೃದ್ಧರಿಗೆ ಬಾಹ್ಯವಾಗಿ ನೀಡಬಹುದಾದ ಸೌಲಭ್ಯಗಳಿಗಿಂತ ಹೃದಯಪೂರ್ವಕವಾದ ಪ್ರೀತಿ-ವಿಶ್ವಾಸ, ಸ್ನೇಹಗಳ ಅವಶ್ಯಕತೆ ಇರುತ್ತದೆ .ಆದರೆ ಈ ನಿಟ್ಟಿನ ಪ್ರಯತ್ನ ಜಗತ್ತಿನ ಯಾವುದೇ ದೇಶದಲ್ಲಿ ಇಲ್ಲದಿರುವುದು ದುರಂತವೇ ಸರಿ. ಪಾಶ್ಚಿಮಾತ್ಯರ ಜೀವನಕ್ರಮವನ್ನು ಭಾರತೀಯರು ಅನುಸರಿಸಲಾಗಿ ಭಾರತೀಯರು ತಮ್ಮ ಭಾವನಾತ್ಮಕತೆಯನ್ನು ಕಳೆದುಕೊಳ್ಳುತ್ತಿರುವುದರಿಂದ ಭಾರತದಂತಹ ರಾಷ್ಟ್ರದಲ್ಲಿಯು ವೃದ್ಧರ ಸಮಸ್ಯೆ ತೀವ್ರವಾಗಿದ್ದು, ವೃದ್ಧರ ಸಮಸ್ಯೆ ಒಂದು ಪ್ರಮುಖ ಸಾಮಾಜಿಕ ಸಮಸ್ಯೆ ಎನಿಸಿದೆ. ಒಟ್ಟಾರೆ ಪ್ರಸ್ತುತ ಸಂಶೋಧನಾ ಲೇಖನವು ವೃದ್ಧರು ಎದುರಿಸುತ್ತಿರುವ /ಅನುಭವಿಸುತ್ತಿರುವ ಪ್ರಮುಖ ಸಾಮಾಜಿಕ ಸಮಸ್ಯೆಗಳನ್ನು ತಿಳಿಸುವಲ್ಲಿ ಮಹತ್ವದ್ದೆನಿಸಿದೆ. ವೃದ್ಧರ ರಕ್ಷಣೆಗಾಗಿ ಕೈಗೊಳ್ಳಲಾಗಿರುವ ಕ್ರಮಗಳೆಲ್ಲವೂ ಸೂಕ್ತಕರವಾಗಿರುವುದು ನಿಜವಾದರೂ, ವೃದ್ಧರ ಸಮಸ್ಯೆಗಳ ನಿವಾರಣೆಯಲ್ಲಿ ಕುಟುಂಬದ ಸದಸ್ಯರ ಪಾತ್ರ ಅಪಾರವಾದುದಾಗಿದೆ. ಹಾಗಾಗಿ ಕುಟುಂಬದ ಯುವ ಪೀಳಿಗೆಯವರು ಹಿರಿಯರನ್ನು ಆದರಿಸುವ, ಗೌರವಿಸುವ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು ಅವಶ್ಯಕವಾಗಿದೆ.ಈ ಹಿನ್ನಲೆಯಲ್ಲಿ ಕುಟುಂಬದ ಸದಸ್ಯರನ್ನು ಉತ್ತಮವಾಗಿ,ಪರಿಣಾಮಕಾರಿಯಾಗಿ ಸಾಮಾಜಿಕರಿಸುವುದು ಅತ್ಯವಶ್ಯಕವಾಗಿದೆ ಎಂಬುದು ಪ್ರಸ್ತುತ ಸಂಶೋಧನಾ ಲೇಖನದ ಆಶಯವಾಗಿದೆ.

## ಆಧಾರ ಗ್ರಂಥಗಳು


- **ಪ್ರೊ.ಕೆ. ಭೈರಪ್ಪ,** ಭಾರತದ ಸಮಾಜ : ಪರಂಪರೆ ಮತ್ತು ಪರಿವರ್ತನೆ ಭಾಗ-1, ಸಪ್ನ ಬುಕ್‌ಹೌಸ್, ಬೆಂಗಳೂರು-2006.
- **ಚ.ನ.ಶಂಕರರಾವ್,** ಸಮಕಾಲೀನ ಸಾಮಾಜಿಕ ಸಮಸ್ಯೆಗಳು, ಜೈ ಭಾರತ ಪ್ರಕಾಶನ-2017.
- **ಚ.ನ. ಶಂಕರರಾವ್,** ಸಮಾಜಶಾಸ್ತ್ರದ ದರ್ಶನ-ಸಂಪುಟ 1 ಮತ್ತು 2, ಜೈ ಭಾರತ ಪ್ರಕಾಶನ,

ಮೈಸೂರು-2010.

- ಪ್ರಜಾವಾಣಿ ದಿನಪತ್ರಿಕೆ, ಭೂಮಿಕಾ ವಿಭಾಗ, ದಿನಾಂಕ: 11-11-2017, ಪುಟ ಸಂಖ್ಯೆ:2.